ಚರ್ಯೆಯೂ ಕೂಡ...' ಎಂತಲೂ ಹೇಳಿದೆ. ಹಿಂದೆಯೇ ನನಗೇ ಗೊತ್ತಿರದೆ ನಿಡಿದುಸಿರೊಂದು ನನ್ನೊಳಗಿನಿಂದ ಹೊರದಬ್ಬಿಕೊಂಡು ಹೊಮ್ಮಿಬಂತು. ಊರು ಬದಲಿದಂತೆ ಪರಿಸ್ಥಿತಿಯೂ ಬದಲಿದೆಯೆಂದು ತನ್ನಷ್ಟಕ್ಕೆ ಬಂದ ಮಾತನ್ನು, ವಾಪಸು ಹೆಕ್ಕಿ ನನ್ನನಗೇ ಮೆಲುಕಿಕೊಂಡೆ. ಪುಪ್ಪುಸದೊಳಗಿನ ವಾಯುಭಾರ ಅನಾಮತ್ತು ಹೆಚ್ಚಿಕೊಂಡಿತ್ತು.

'ಅಮರಾವತಿ'ಯಲ್ಲಿ ಪಾ ನಿಗದಿಸಿದ್ದ ಮೇಜು ಸೇರಿ, ಇಬ್ಬರೂ ಆಚೀಚೆ ನೆರೆಯುವಾಗ ಏಳೂ ಮೂರೇನೋ ಅಷ್ಟೆ. 'ಓಹ್ ಗ್ಗಾಡ್... ವಿ ಆರ್ ಅರ್ಲೀ. ಇನ್ನೂ ಇಪ್ಪತ್ತು ಮಿನಿಟು ಕಾಯಬೇಕು...' ಎಂದು ತನ್ವಿಗೆ ಕೇಳಿಸುವ ಹಾಗೆ, ನನ್ನನಗೇ ಹೇಳಿಕೊಂಡೆ. ಈ ಮಾತಿಗೆ ತಲೆ ಕೆಡಿಸಿಕೊಳ್ಳದ ತನ್ನದೇ ಜಾಡಿನಲ್ಲಿ ತನ್ವಿ, 'ಸಿದ್ಧ್... ಏನನಿಸುತ್ತೆ ನಿನಗೆ? ನಿನ್ನ ಅಪ್ಪ ಅಮ್ಮ ನನ್ನನ್ನ ಒಪ್ಪುತ್ತಾರಲ್ಲವಾ?' ಎಂದು ಕೇಳಿದಳು. ಇದು ಎಷ್ಟನೆಯ ಪುನರಾವರ್ತನೆಯೋ ಯಾರಿಗೆ ಗೊತ್ತು? 'ಈಸೀ ಈಸೀ... ನಾನಿದ್ದೀನಲ್ಲವಾ...' ಅಂತಂದು ಕಣ್ಣಲ್ಲೇ ಪ್ರೀತಿಯ ಸಂಜ್ಞೆ ತೋರಿ, ಮತ್ತೊಮ್ಮೆ ಸಮಾಧಾನ ಹೇಳಿದೆ. 'ಅಮರಾವತಿ'ಯ ಟೆರೇಸ್‌ಲೌಂಜಿನಿಂದ ಇಡೀ ಮಹಾನಗರಿಯ ಮಹಾ ಅಡಾವುಡಿಯ ಪ್ರಾತಿನಿಧಿಕ ಝಲಕು ತೋರಿಬರುತ್ತಿತ್ತು. ಎಗ್ಗಿಲ್ಲದೆ ನೆಲದಿಂದೆದ್ದ ಕಟ್ಟಡಗಳು. ಅವುಗಳಿಂದ ತೂರಿ ಆಕಾಶದಲ್ಲಿ ಅಕ್ರಮವಾಗಿ ಕಲೆಯುವ ಅಸಂಗತ ಬೆಳಕು. ಕತ್ತಲಿನಲ್ಲೂ ರಿಕೊಂಡ ಊರನ್ನೇ ಅನಾಮತ್ತು ಸುತ್ತುವಂತಹ ಮಂದ್ರದ್ಯುತಿಯ ಪ್ರಭಾವಳಿ. ಮಬ್ಬಿನ ಬೋರಲು... ಕೆಳಗೆ ರಿಂಗ್‌ರೋಡಿನಲ್ಲಿ ಕಾರುಮೋಟಾರುಗಳದ್ದೂ ಯದ್ರಾಬಿರ್ರಿ ವಹಿವಾಟು. ಈ ರಿಂಗ್ರೋಡಾದರೂ, ನಾವಿದ್ದ ಎತ್ತರದಿಂದ, ಒಂದು ಅಜಾಗರೂಕ ಅವಸರದಲ್ಲಿ ಆಯದೆ ಕಾಯದೆ, ಅಡ್ಡಾದಿಡ್ಡಿ ಪೋಣಿಸಿಟ್ಟ ಮಣಿಸರದಂತೆ ತೋರಿಬಂತು.

'ಹೇ ಸಿದ್ಧ್... ಆಕಸ್ಮಾತ್ ಇದು ಆಗಿಬರದಿದ್ದರೆ ಏನು ಮಾಡೋದು?' ತನ್ವಿ ವಾಪಸು ತನ್ನ ಒಳತುಮುಲದತ್ತಲೇ ಇದ್ದು ಮಾತು ಹೆಣೆದಳು.

ಸ್ವದೇಶದಲ್ಲಿಯೇ ನೆಲೆಯೂರಿಕೊಳ್ಳೋಣವೆಂದು ನಾನು ನಿರ್ಣಯಿಸಿದಾಗ್ಗಿನಿಂದ ಆಗಿಂದಾಗ ಎದುರು ಜೀಕುತ್ತಿರುವ ಪ್ರಶ್ನೆ ಇದು. ಒಪ್ಪುತ್ತಾರೋ ಇಲ್ಲವೋ? ಒಪ್ಪದಿದ್ದಲ್ಲಿ ಮುಂದೇನು? ಇಂಥವಕ್ಕೆ ನಾನೂನು ಬಹಳ ಸರ್ತಿ ಉತ್ತರಿಸಿಯಾಗಿದೆ. ಒಳಮನಸ್ಸು ಬಿಚ್ಚಿ ಬಿತ್ತರಿಸಿಯಾಗಿದೆ. ನನ್ನಲ್ಲೂ ಅಂಕೆಶಂಕೆಯಿಲ್ಲದಿಲ್ಲ. ಆತಂಕವಿಲ್ಲವಂತೇನಲ್ಲ. ಇವುಗಳಿಗೂ ಮಿಕ್ಕು ಇಬ್ಬರ ಬದುಕು ದೊಡ್ಡದೆಂದೂ, ಆ ಕುರಿತೇ ಯೋಚಿಸುವುದೆಂದೂ ಸುಮ್ಮಗಿದ್ದೇನೆ. ಅವಳಿಗೂ ತಿಳಿಹೇಳಿದ್ದೇನೆ.

ತನ್ವಿ ಪಾಕಿಸ್ತಾನದ ಮೂಲಸ್ಥೆ. ನನ್ನ ಕುರಿತಾದ ಪ್ರೀತಿಯನ್ನಷ್ಟೇ ನೆಚ್ಚಿ, ನನ್ನೊಡನಿರಲಿಕ್ಕೆಂದೇ ದೇಶ ಬಿಟ್ಟುಬಂದವಳು. ಈಗ್ಗೆ ವರ್ಷದೊಪ್ಪತ್ತಿನ ಹಿಂದೊಂದು ನಟ್ಟಿರುಳಲ್ಲಿ, ಪೇಶಾವರದ ಓಲ್ಡ್‌ಸಿಟಿಯಲ್ಲಿ ನಾನು ದರವೇಸಿಯ ಹಾಗೆ ಬೇಕಾಬಿಟ್ಟಿ ಅಲೆಯುತ್ತಿರುವಾಗ, ಆ ಊರಿನಷ್ಟೇ ಪುರಾತನವಿದ್ದ ಬೀದಿಯೊಂದರಲ್ಲಿ ಅಚಾನಕ್ಕು ಸಿಕ್ಕಳು. ಅಷ್ಟೇ ಅಚಾನಕ್ಕಾಗಿ ನನ್ನೊಡನೆ ಮಿಕ್ಕುಬಂದಳು. ಹೇಳಿಕೊಂಡು ಹೋದರೆ,ಈ ಪ್ರಣಯಕಥಾನಕವನ್ನು ಇದ್ದಿದ್ದಿದ್ದ ಹಾಗೇ ಬಲು ಝಬರುದಸ್ತು ದೃಶ್ಯವೈಭವವಿರುವ ಬಾಲಿವುಡ್ ಸಿನಿಮಾದ ಪಟಕತೆಯಾಗಿಸಬಹುದು! ತನ್ವಿ ಇಂತಿಯಾಝ್ ಅಖ್ತರ್ ಅಂತೆಂಬ ಸಿಂಧ್ ಪ್ರಾಂತ್ಯ ಮೂಲದ ಮುಸಲ್ಮಾನೀ ಹೆಣ್ಣು ಸಿದ್ಧಾರ್ಥ್ ಮಂಜ್ರೇಕರ್ ಷ್ರಾಫ್ ಅಂತೆಂಬ ಹೆಸರಿಟ್ಟುಕೊಂಡು, ಇಪ್ಪತ್ತೊಂದನೇ ಶತಮಾನದ ಸಕಲಾತಿ ಸದ್ಯದೊಡನೆ ಅಂದರೆ ಬೆಂಗಳೂರಿನ ಅತ್ಯುತ್ಕಟ 'ನಾಗರಿಕತೆ'ಯೊಡನೆ ನೇರ ಕಸಿ ಮಾಡಿಕೊಂಡಿರುವ, ಕಂಬಖ್ತ್ ಮೋಜುಮಸ್ತಿಯ 'ನಾನೆಂಬ' ದೇಶಸ್ಥ ಬ್ರಾಹ್ಮಣನೊಡನೆ, ತನ್ನ ಧರ್ಮಕರ್ಮಗಳ ಪರಮಕರ್ಮಠ ಗೀಟುಕಟ್ಟಲೆಯನ್ನು ಮೊಹಬ್ಬತಿಶ್ಕಿನ ಸಲುವಲ್ಲಿ ದಾಟಿ,